# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **230** |
| **ಸದಸ್ಯರ ಹೆಸರು** | : | **ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | : | **06.07.2023** |
| **ಉತ್ತರಿಸಬೇಕಾದ ಸಚಿವರು** | : | **ಉಪ ಮುಖ್ಯಮಂತ್ರಿಯವರು** |

*******

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| **ಅ** | ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.27/2ರಲ್ಲಿ 3ಎಕರೆ 23 ಗುಂಟೆ ಹಾಗೂ 35/2 ರಲ್ಲಿ 00-37 ಗುಂಟೆ ಜಮೀನನ್ನು ಬಿ.ಡಿ.ಎ. ವತಿಯಿಂದ ಭುಸ್ವಾಧೀನ ಪಡಿಸಿಕೊಳ್ಳಲಾಗಿದೆಯೇ; (ಪೂರ್ಣ ಮಾಹಿತಿಯೊಂದಿಗೆ ವಿವರ ನೀಡುವುದು) | 1. ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.27/2ರಲ್ಲಿನ 3ಎಕರೆ 23ಗುಂಟೆ ಜಮೀನನ್ನು ಪ್ರಾಧಿಕಾರವು ಬಿ.ಟಿ.ಎಂ.4ನೇ ಹಂತ ಬಡಾವಣೆ ನಿರ್ಮಾಣಕ್ಕಾಗಿ ಪ್ರಾಥಮಿಕ ಅಧಿಸೂಚನೆ ಸಂಖ್ಯೆ: ಬಿ.ಡಿ.ಎ./ಅಭೂಸ್ವಾಅ/ಎ/ಪಿಆರ್/ 117ನ್ನು ದಿನಾಂಕ:15.12.1988 ರಂದು ಹೊರಡಿಸಲಾಗಿರುತ್ತದೆ. ನಂತರ ಅಂತಿಮ ಅಧಿಸೂಚನೆ ಸಂಖ್ಯೆ: ಹೆಚ್ ಯು ಡಿ/334/ಎಂಎನ್ ಎಕ್ಸ್/1990, ದಿನಾಂಕ:03.11.1990 ರಲ್ಲಿ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ದಿನಾಂಕ:11.11.1996 ರಂದು ಐತೀರ್ಪು ಅನುಮೋದನೆಯಾಗಿರುತ್ತದೆ. ದಿನಾಂಕ:08.02.2001 ರಂದು ಭೂಸ್ವಾಧೀನ ಕಾಯ್ದೆ ಕಲಂ 16(2) ರಂತೆ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಚುರಪಡಿಸಲಾಗಿದೆ.<br><br>2. ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.27/2ರಲ್ಲಿ 3ಎಕರೆ 23ಗುಂಟೆ ಜಮೀನಿಗೆ ಸಂಬಂಧಿಸಿದಂತೆ ರಿಟ್ ಅರ್ಜಿ ಸಂಖ್ಯೆ: 41386-95 / 2017 ರಲ್ಲಿ ದಿನಾಂಕ: 24.09.2019 ರಂದು ಆದೇಶವಾಗಿರುತ್ತದೆ. ಪ್ರಾಧಿಕಾರದ ವತಿಯಿಂದ ಸದರಿ ಆದೇಶದ ವಿರುದ್ಧ ರಿಟ್ ಅಪೀಲು ಸಂಖ್ಯೆ: 398/2021ನ್ನು ದಾಖಲಿಸಲಾಗಿರುತ್ತದೆ.<br><br>3. ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.35/2ರಲ್ಲಿನ 0-39 ಗುಂಟೆ ಜಮೀನನ್ನು ಪ್ರಾಧಿಕಾರವು ಬಿ.ಟಿ.ಎಂ.4ನೇ ಹಂತ ಬಡಾವಣೆ ನಿರ್ಮಾಣಕ್ಕಾಗಿ ಅಂತಿಮ ಅಧಿಸೂಚನೆ ಸಂಖ್ಯೆ:ಹೆಚ್ ಯುಡಿ /334/ಎಂ ಎನ್ ಎಕ್ಸ್/1990, ದಿನಾಂಕ:03.11.1990 ರಂತೆ ಅಧಿಸೂಚನೆ ಹೊರಡಿಸಲಾಗಿದೆ. ಸದರಿ ಜಮೀನಿಗೆ ದಿನಾಂಕ:25.01.1994ರಂದು ಐತೀರ್ಪು ಅನುಮೋದನೆಯಾಗಿರುತ್ತದೆ. ದಿನಾಂಕ: 14.02.1994 ರಂದು ತಾಂತ್ರಿಕ ವಿಭಾಗಕ್ಕೆ ಹಸ್ತಾಂತರಿಸಲಾಗಿದೆ. ದಿನಾಂಕ:27.10.1994 ರಂದು ಭೂಸ್ವಾಧೀನ ಕಾಯ್ದೆ ಕಲಂ 16(2) ರಂತೆ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಚುರಪಡಿಸಲಾಗಿದೆ. |

| | | |
|---|---|---|
| ಆ | ಸದರಿ ಭೂ ಪ್ರದೇಶಗಳಲ್ಲಿ ಬಿ.ಡಿ.ಎ. ಬಡಾವಣೆ ನಿರ್ಮಾಣ ಮಾಡಿ, ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆಯೇ; (ಹಂಚಿಕೆ ಮಾಡಲಾಗಿರುವ ಪೂರ್ಣ ವಿವರಗಳನ್ನು ನೀಡುವುದು) | ಹೌದು.<br><br>ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದದಿಂದ ಪ್ರಶ್ನಿತ ಜಮೀನಿನಲ್ಲಿ ನಿರ್ಮಾಣ ಮಾಡಲಾದ ಬಡಾವಣೆಯಲ್ಲಿ ನಿವೇಶನ ಹಂಚಿಕೆ ಮಾಡಲಾಗಿರುವ ವಿವರಗಳು ಈ ಕೆಳಕಂಡಂತಿದೆ : |
| ಇ | ಬಡಾವಣೆ ರಚನೆ ಮಾಡಿ, ನಿವೇಶನ ಸಂಖ್ಯೆಗಳನ್ನು ಗುರುತಿಸಿ, ಸುಮಾರು 40 ವರ್ಷಗಳಾಗಿದ್ದರೂ, ನಿವೇಶನಗಳನ್ನು ಹಂಚಿಕೆ ಮಾಡದೆ ಇರಲು ಕಾರಣಗಳೇನು; | (see table below)<br><br>ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಹಾಗೂ ಮಾನ್ಯ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಹಲವಾರು ದಾವೆಗಳು ದಾಖಲಾಗಿರುವುದರಿಂದ, ಬಾಕಿ ನಿವೇಶನಗಳನ್ನು ಹಂಚಿಕೆ ಮಾಡಿರುವುದಿಲ್ಲ. |
| ಈ | ಬಡಾವಣೆ ರಚನೆ ಮಾಡಿ, ನಿವೇಶನ ಹಂಚಿಕೆ ಮಾಡಿದ ಸುಮಾರು 40 ವರ್ಷಗಳ ನಂತರ ಬಿ.ಡಿ.ಎ. ಅಧಿಕಾರಿಗಳು, ಸದರಿ ಸ್ವತ್ತನ್ನು ಅಕ್ರಮವಾಗಿ ಖಾಸಗಿಯವರ ಪರವಾಗಿ ಎನ್.ಓ.ಸಿ. ನೀಡಿ ಪರಭಾರೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಇಲ್ಲ. |
| ಉ | ಸದರಿ ಸರ್ಕಾರಿ ಸ್ವತ್ತುಗಳನ್ನು ಒಬ್ಬ ಖಾಸಗಿ ವ್ಯಕ್ತಿ ಬೇರೆಯವರಿಗೆ ಮಾಡಿರುವುದು ಮರು ಮಾರಾಟ ಮಾಡಿರುವುದು ಹಾಗೂ ಒಡಂಬಡಿಕೆ ಮಾಡಿಕೊಂಡಿರುವುದಲ್ಲದೆ, ಸದರಿ ಜಾಗಗಳಿಗೆ ಫಲಾನುಭವಿಗಳು ಹೋದಲ್ಲಿ ಖಾಸಗಿ ವ್ಯಕ್ತಿಯು ಗೂಂಡಾಗಿರಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಇಲ್ಲ. |
| ಊ | ಸರ್ಕಾರಿ ಆಸ್ತಿಯನ್ನು ಅಕ್ರಮವಾಗಿ ಖಾಸಗಿಯವರಿಗೆ ಮಾಡಿಕೊಟ್ಟು ಸರ್ಕಾರದ | ಉದ್ಭವಿಸುವುದಿಲ್ಲ. |

| ಕ್ರ ಸಂ. | ನಿವೇಶನ ಸಂಖ್ಯೆ | ಹಂಚಿಕೆ ವಹಿಯಂತೆ | ನೋಂದಣಿ ದಿನಾಂಕ |
|---|---|---|---|
| 1 | 1071/A | ಎಲ್. ದಾಸಪ್ಪ | 09/09/2014 |
| 2 | 1142/C | ಇಂದಿರಾಬಾಯಿ ಶಿಂಧೆ | 23/06/2017 |
| 3 | 1204 | ಕವಿತ ಎಸ್ | - |
| 4 | 1205 | ಎಸ್. ಈಶ್ವರ್ ಪ್ರಸಾದ್ | 08/07/2019 |
| 5 | 1206 | ಸರಸ್ವತಮ್ಮ | - |
| 6 | 1207 | ಎಸ್. ಕೃಷ್ಣ | - |
| 7 | 1241/F | ಬಿ.ಆರ್ ಕೆರೂರ್ | 20/06/2022 |
| 8 | 1241/G | ಟಿ. ಹಾಲಸಿದ್ದಪ್ಪ | 14/02/2019 |
| 9 | 1528/C | ಗೋಪಾಲ್ ಸಿ | 10/07/2008 |
| 10 | 1528/D | ಅರುಣ್ ಜಯರಾಮನ್ | 21/05/2009 |
| 11 | 1571 | ಮುನಿಆಂಜನಪ್ಪ ಮತ್ತು ಮುತ್ತಮ್ಮ | 17/05/2017 |
| 12 | 1071/B | ಹಂಚಿಕೆ ಮಾಡಿ ರದ್ದುಪಡಿಸಲಾಗಿರುತ್ತದೆ | - |
| 13 | 1571 | ಹಂಚಿಕೆ ಮಾಡಿ ರದ್ದುಪಡಿಸಲಾಗಿರುತ್ತದೆ | - |

| | | |
|---|---|---|
| | ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟ ಉಂಟು ಮಾಡಿರುವ ತಪ್ಪಿತಸ್ಥ ಬಿ.ಡಿ.ಎ. ಅಧಿಕಾರಿಗಳ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳೇನು; | |
| ಖ | ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ 2.27/1, 27/2, 27/3, 29/1, 29/2, 29/3, 30, 33 ಹಾಗೂ 35 ಈ ಸ್ವತ್ತುಗಳು ಯಾರ ಸ್ವಾಧೀನದಲ್ಲಿವೆ? (ಪೂರ್ಣ ವಿವರ ನೀಡುವುದು) | ವಿವರಗಳನ್ನು **ಅನುಬಂಧ-1** ರಲ್ಲಿಸಿದೆ. |

**ಸಂಖ್ಯೆ**: ನಅಇ 159 ಬೆಂಭೂಸ್ವಾ 2023

**(ಡಿ.ಕೆ ಶಿವಕುಮಾರ್)**
ಉಪ ಮುಖ್ಯಮಂತ್ರಿ

## ಅನುಬಂಧ-1

ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.27/1, 27/2, 27/3, 29/1, 29/2, 29/3, 30, 33 ಹಾಗೂ 35 ಈ ಸರ್ವೆ ನಂಬರಗಳು ಪ್ರಾಧಿಕಾರದ ವತಿಯಿಂದ ಭೂಸ್ವಾಧೀನಗೊಂಡ ಅಧಿಸೂಚಿತ ಪ್ರದೇಶಗಳಾಗಿದ್ದು, ಹಲವಾರು ಸುತ್ತಿನಲ್ಲಿ ನ್ಯಾಯಾಲಯಗಳಲ್ಲಿ ರಿಟ್ ಅರ್ಜಿ / ಮೂಲ ದಾವೆ / ಮೇಲ್ಮನವಿಗಳು ದಾಖಲಾಗಿದ್ದು, ಸರ್ವೆ ನಂಬರ್‌ವಾರು ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರಮ ಸಂಖ್ಯೆ | ಸರ್ವೆ ನಂ. | ವಿವರ |
|---|---|---|
| 1 | 27/1 | 02ಎಕರೆ 01ಗುಂಟೆ ಪ್ರದೇಶದಲ್ಲಿ ಪ್ರಾಧಿಕಾರದಿಂದ ಬಡಾವಣೆ ರಚಿಸಲಾಗಿರುತ್ತದೆ. ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.27/1ರಲ್ಲಿ 2ಎಕರೆ 01 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ರಿಟ್ ಅರ್ಜಿ ಸಂ.41771-792/2002 ದಿನಾಂಕ:10.04.2003 ರಂದು ವಜಾಗೊಂಡಿದೆ. ತದನಂತರ ರಿಟ್ ಅರ್ಜಿ ಸಂಖ್ಯೆ:6360/2020ರ ಸಂಬಂಧ ಪ್ರಾಧಿಕಾರದ ವತಿಯಿಂದ ರಿಟ್ ಅಪೀಲು ಸಂ.882/2021 ದಾಖಲಾಗಿರುತ್ತದೆ. ಇದೇ ಸರ್ವೆ ನಂಬರ್‌ಗೆ ಸಂಬಂಧಿಸಿದಂತೆ ದಾಖಲಿಸಲ್ಪಟ್ಟಿದ್ದ ಮೂಲದಾವೆ ಸಂಖ್ಯೆ: 1719/1999, ದಿನಾಂಕ:23.08.2018 ರಂದು ವಜಾಗೊಂಡಿರುತ್ತದೆ. |
| 2 | 27/2 | 3ಎಕರೆ 23ಗುಂಟೆ ಪ್ರದೇಶದಲ್ಲಿ ಪ್ರಾಧಿಕಾರದಿಂದ ಬಡಾವಣೆ ರಚಿಸಲಾಗಿದೆ. ದೇವರಚಿಕ್ಕನಹಳ್ಳಿ ಗ್ರಾಮದ ಸ.ನಂ.27/2ಕ್ಕೆ ಸಂಬಂಧಿಸಿದಂತೆ ಮಾನ್ಯ ಸಿಟಿ ಸಿವಿಲ್ ನ್ಯಾಯಾಲಯಗಳಲ್ಲಿ ಪ್ರಾಧಿಕಾರದ ವಿರುದ್ಧ ದಾಖಲಾಗಿದ್ದ ಮೂಲದಾವೆ ಸಂಖ್ಯೆ: 1824/1993 ದಿನಾಂಕ: 28.11.2000ರಲ್ಲಿ ವಜಾಗೊಂಡಿದೆ. ಶ್ರೀಮತಿ ಶಾಂತಮ್ಮ ಮತ್ತು ಇತರರು ಭೂಸ್ವಾಧೀನದ ಕ್ರಮವನ್ನು ಪ್ರಶ್ನಿಸಿ, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದ ರಿಟ್ ಪಿಟಿಷನ್ ಸಂಖ್ಯೆ: 41386-395/2017 ರಲ್ಲಿ ದಿನಾಂಕ :24.09.2019 ರಂದು ಅಂತಿಮ ಆದೇಶವಾಗಿರುತ್ತದೆ. ಅರ್ಜಿದಾರರು ದಿನಾಂಕ:14.01.2020ರಂದು ಹಿಂಬರಹವನ್ನು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿಯವರ ಮನವಿಯನ್ನು ಪರಿಶೀಲಿಸಿ ಸರ್ವೆ ನಂಬರಿನ ವಾಸ್ತವಾಂಶ ಮಾಹಿತಿಯನ್ನು ಅರ್ಜಿದಾರರಿಗೆ ನಿಯಮಾನುಸಾರ ಹಿಂಬರಹ ನೀಡಲಾಗಿದ್ದು, ಸದರಿ ಹಿಂಬರಹವು ನಿರಾಕ್ಷೇಪಣಾ ಪತ್ರವಾಗಿರುವುದಿಲ್ಲ. ಆದಾಗ್ಯೂ, ಸದರಿ ಹಿಂಬರಹವು ದುರುಪಯೋಗವಾಗುತ್ತಿರುವುದು ಚರ್ಚೆಯಲ್ಲಿರುವುದರಿಂದ ಮಾನ್ಯ ನ್ಯಾಯಾಲಯದ ಆದೇಶವನ್ನು ಮತ್ತೊಮ್ಮೆ ಕಾನೂನಾತ್ಮಕವಾಗಿ ಪರಿಶೀಲಿಸಿ, ರಿಟ್ ಪಿಟಿಷನ್ ಸಂಖ್ಯೆ:41386-395/2017ರ ಆದೇಶದ ವಿರುದ್ಧ ಮಾನ್ಯ ವಿಭಾಗೀಯ ಪೀಠಕ್ಕೆ ರಿಟ್ ಮೇಲ್ಮನವಿ ಸಂಖ್ಯೆ: 398/2021 ಅನ್ನು ದಾಖಲಿಸಲಾಗಿದೆ. |
| 3 | 27/3 | 1ಎಕರೆ 17ಗುಂಟೆ ಪ್ರದೇಶದಲ್ಲಿ ಪ್ರಾಧಿಕಾರದಿಂದ ಬಡಾವಣೆ ರಚಿಸಲಾಗಿರುತ್ತದೆ. ನಿವೇಶನಗಳನ್ನು ವಿಂಗಡಿಸಿದ್ದು, ಪ್ರಾಧಿಕಾರದ ವಶದಲ್ಲಿರುತ್ತದೆ. ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.27/3ರಲ್ಲಿ 1ಎಕರೆ 17ಗುಂಟೆ ಜಮೀನಿಗೆ ಸಂಬಂಧಿಸಿದಂತೆ ರಿಟ್ ಅರ್ಜಿ ಸಂ.41771-792/2002, ದಿನಾಂಕ:10.04.2003ರಂದು ವಜಾಗೊಂಡಿದೆ. ರಿಟ್ ಅರ್ಜಿ ಸಂಖ್ಯೆ.19904/2016 ದಾಖಲಾಗಿದ್ದು, ಪ್ರಸ್ತುತ ವಿಚಾರಣೆಗೆ ಬಾಕಿ ಇರುತ್ತದೆ. |
| 4 | 29/1 | 06ಎಕರೆ 12ಗುಂಟೆ ಜಮೀನಿನ ಪೈಕಿ 02 ಎಕರೆ 20 ಗುಂಟೆ ಜಮೀನು ಗ್ರಾಮಠಾಣಾ ಆಗಿದ್ದರಿಂದ ಭೂಸ್ವಾಧೀನ ಶಾಖೆಯಿಂದ ಅವಾರ್ಡ್ ಆಗಿರುವುದಿಲ್ಲ. ಈ ಪ್ರದೇಶದಲ್ಲಿ ಹಳೆಯ ಕಟ್ಟಡಗಳು (ರೆವಿನ್ಯೂ ಪಾಕೆಟ್) ಇರುತ್ತದೆ. ಉಳಿಕೆ 03 ಎಕರೆ 32 ಗುಂಟೆ ಜಾಗದಲ್ಲಿ ಪ್ರಾಧಿಕಾರದಿಂದ ಬಡಾವಣೆ ರಚಿಸಲಾಗಿರುತ್ತದೆ. ಸದರಿ ಜಮೀನಿಗೆ ಸಂಬಂಧಪಟ್ಟಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ : ಸಂ. 64621-25/2016 ರಲ್ಲಿ ನೀಡಲಾದ ದಿನಾಂಕ: 24.09.2019 ರ ಆದೇಶದಲ್ಲಿ ಭೂಸ್ವಾಧೀನ ಪ್ರಕ್ರಿಯೆಯು ಲ್ಯಾಪ್ಸ್ ಆಗಿದೆ ಎಂದು ತಿಳಿಸಲಾಗಿರುತ್ತದೆ. ಇದರ ವಿರುದ್ಧ ಪ್ರಾಧಿಕಾರದ ವತಿಯಿಂದ ರಿಟ್ ಅಪೀಲು ದಾಖಲಿಸಲು ಕ್ರಮವಹಿಸಲಾಗಿದೆ. ಮುಂದುವರೆದು, ಸರ್ವೆ ನಂ.29/1 ರಲ್ಲಿ ಕಂದಾಯ ಇಲಾಖೆಯಿಂದ 29/4, 29/5 ಮತ್ತು 29/6 ಎಂದು ದಾಖಲೆಗಳನ್ನು ಮಾಡಿಕೊಂಡು ಅನಧಿಕೃತ ಬಡಾವಣೆ ಮಾಡಲು ಪ್ರಯತ್ನಿಸಿದ್ದು, ತತ್ಸಂಬಂಧ ಯಾವುದೇ ದಾವೆಗಳು ಇಲ್ಲದಿರುವುದನ್ನು ಖಾತ್ರಿಪಡಿಸಿಕೊಂಡು ಇದನ್ನು ತೆರವುಗೊಳಿಸಲು ಪ್ರಾಧಿಕಾರದಿಂದ ಕ್ರಮಕೈಗೊಳ್ಳಲಾಗುವುದು. |

| | | |
|---|---|---|
| **5** | 29/2 | 01 ಎಕರೆ 05 ಗುಂಟೆ ಪ್ರದೇಶದಲ್ಲಿ ಪ್ರಾಧಿಕಾರದಿಂದ ಬಡಾವಣೆ ರಚಿಸಲಾಗಿರುತ್ತದೆ. ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.29/2 ರಲ್ಲಿ 01 ಎಕರೆ 05 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ: 6360/2020 ರ ಸಂಬಂಧ ಪ್ರಾಧಿಕಾರ ವತಿಯಿಂದ ರಿಟ್ ಅಪೀಲು ಸಂ.882/2021 ದಾಖಲಿಸಲಾಗಿದ್ದು, ಪ್ರಸ್ತುತ ವಿಚಾರಣೆಗೆ ಬಾಕಿ ಇರುತ್ತದೆ. |
| **6** | 29/3 | 01 ಎಕರೆ 01 ಗುಂಟೆ ಪ್ರದೇಶದಲ್ಲಿ ಪ್ರಾಧಿಕಾರದಿಂದ ಬಡಾವಣೆ ರಚಿಸಲಾಗಿರುತ್ತದೆ. ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.29/3 ರಲ್ಲಿ 01 ಎಕರೆ 01 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಅರ್ಜಿ ಸಂಖ್ಯೆ:6360/2020ರ ಸಂಬಂಧ ಪ್ರಾಧಿಕಾರದ ವತಿಯಿಂದ ರಿಟ್ ಅಪೀಲು ಸಂ.882/2021 ದಾಖಲಿಸಲಾಗಿದ್ದು, ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ. |
| **7** | 30 | 03 ಎಕರೆ 10 ಗುಂಟೆ ಪ್ರದೇಶದ ಜಮೀನಿನಲ್ಲಿ ಪ್ರಾಧಿಕಾರದಿಂದ ಭಾಗಶಃ ಬಡಾವಣೆ ನಿರ್ಮಿಸಿದ್ದು, ಉಳಿದ ಭಾಗಶಃ ಭಾಗದಲ್ಲಿ ಅನಧಿಕೃತವಾಗಿ ಒತ್ತುವರಿ ಮಾಡಿಕೊಂಡು ಶೆಡ್ ಮತ್ತು ಆರ್.ಸಿ.ಸಿ ಕಟ್ಟಡಗಳನ್ನು ನಿರ್ಮಿಸಿಕೊಂಡು ಸಂಪೂರ್ಣವಾಗಿ ಬಿಲ್ಟಪ್ (Built up) ಆಗಿರುತ್ತದೆ. ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.30 ರಲ್ಲಿ 03 ಎಕರೆ 10 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ರಿಟ್ ಅರ್ಜಿ :64621-625/2016 ರಲ್ಲಿ ದಿನಾಂಕ 24.09.2019 ರಂದು ಪ್ರಾಧಿಕಾರದ ವಿರುದ್ಧ ಆದೇಶವಾಗಿರುವುದರಿಂದ ಸದರಿ ಆದೇಶದ ವಿರುದ್ಧ ಪ್ರಾಧಿಕಾರದ ವತಿಯಿಂದ ರಿಟ್ ಅಪೀಲು ದಾಖಲಿಸಲು ಕ್ರಮವಹಿಸಲಾಗಿದೆ. |
| **8** | 33 | 02 ಎಕರೆ 27 ಗುಂಟೆ ಪ್ರದೇಶದಲ್ಲಿ ಪ್ರಾಧಿಕಾರದಿಂದ ಬಡಾವಣೆ ರಚಿಸಲಾಗಿರುತ್ತದೆ. ಸದರಿ ಜಮೀನಿನ ಸರ್ವೆ ನಂ.33/2ಎ ಮತ್ತು 33/2ಬಿ ಗಳ ಮೇಲೆ ರಿಟ್ ಸಂ. 23251-255/2016 ರಲ್ಲಿ ನೀಡಲಾದ ದಿನಾಂಕ:09.08.2017ರ ಆದೇಶವು ಪ್ರಾಧಿಕಾರದ ವಿರುದ್ಧವಾಗಿದೆ. ಈ ಆದೇಶದ ವಿರುದ್ಧ ಪ್ರಾಧಿಕಾರದ ವತಿಯಿಂದ ದಾಖಲಿಸಿದ್ದ ರಿಟ್ ಅಪೀಲು ಸಂ. 1561/2018 ದಿನಾಂಕ: 01.02.2018 ರಂದು ವಜಾಗೊಂಡಿದೆ. ಈ ಅಪೀಲು ಆದೇಶದ ವಿರುದ್ಧ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ. ದಾಖಲಿಸಲು ಕ್ರಮವಹಿಸಲಾಗಿ ವಕೀಲರ ಸಲಹೆಯಂತೆ ಪ್ರಸ್ತುತ Restoration Application ದಾಖಲಿಸಲು ಕ್ರಮವಹಿಸಿದೆ. ಸರ್ವೆ ನಂ.33/1 ಜಮೀನಿನಲ್ಲಿ ಪ್ರಾಧಿಕಾರದಿಂದ ಬಡಾವಣೆ ರಚಿಸಲಾಗಿರುತ್ತದೆ. ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.33/1 ರಲ್ಲಿ 01 ಎಕರೆ 17 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ದಾಖಲಾಗಿದ್ದ ರಿಟ್ ಅರ್ಜಿ ಸಂ.4560/2021 ದಿನಾಂಕ: 01.09.2021 ರಂದು ವಜಾಗೊಂಡಿದೆ. |
| **9** | 35 | ಸರ್ವೆ ನಂ.35/1 ರಲ್ಲಿ 01 ಎಕರೆ 00 ಗುಂಟೆ ಪ್ರದೇಶದಲ್ಲಿ ಪ್ರಾಧಿಕಾರದಿಂದ ಬಡಾವಣೆ ರಚಿಸಲಾಗಿರುತ್ತದೆ. ಸರ್ವೆ ನಂ.35/2 ರಲ್ಲಿ 00-39 ಗುಂಟೆ ಪ್ರದೇಶದಲ್ಲಿ ಪ್ರಾಧಿಕಾರದಿಂದ ಬಡಾವಣೆ ರಚಿಸಲಾಗಿರುತ್ತದೆ. ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 12288/2018 ರಲ್ಲಿ ನೀಡಲಾದ ದಿನಾಂಕ:03.03.2020ರ ಆದೇಶದ ವಿರುದ್ಧ ಪ್ರಾಧಿಕಾರದ ವತಿಯಿಂದ ದಾಖಲಿಸಲಾಗಿದ್ದ ರಿಟ್ ಅಪೀಲು : 740/2021 ದಿನಾಂಕ:10.11.2021 ರಂದು ವಜಾಗೊಂಡಿದೆ. ಸದರಿ ಆದೇಶದ ವಿರುದ್ಧ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ. ಸಂಖ್ಯೆ: 1349/2022 ಅನ್ನು ದಾಖಲಿಸಿದ್ದು, ಮಾನ್ಯ ಸರ್ವೋಚ್ಚ ನ್ಯಾಯಾಲಯದಿಂದ Status quo ಆದೇಶವಾಗಿ, ವಿಚಾರಣೆ ಬಾಕಿ ಇರುತ್ತದೆ. |

ಬೇಗೂರು ಹೋಬಳಿ, ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.27/1, 27/2, 27/3, 29/1, 29/2, 29/3, 30, 33 35 ರ ಜಮೀನಿನ ಆರ್.ಟಿ.ಸಿ ಕಾಲಂ 9 ಮತ್ತು 12(2)ರಲ್ಲಿ ಬಿಡಿಎ ಎಂದು ನಮೂದಿಸಲು ತಹಶೀಲ್ದಾರ್, ಬೆಂಗಳೂರು ದಕ್ಷಿಣ ಇವರನ್ನು ದಿನಾಂಕ:13.02.2023ರ ಪತ್ರದಲ್ಲಿ ಕೋರಲಾಗಿದೆ.